International Journal of Kannada Research 2020; 6(2): 106-111




International Journal of Kannada Research
www.kannadajournal.com

**ISSN: 2454–5813**
IJKR 2020; 6(2): 106-111
© 2020 IJKR
www.kannadajournal.com
Received: 13-01-2020
Accepted: 17-02-2020

**ಸಂತೋಷ ಶೆಟ್ಟಿ**
ಸಂಶೋಧಕ, ಇತಿಹಾಸ
ಅಧ್ಯಯನ ಮತ್ತು ಸಂಶೋಧನಾ
ಇಲಾಖೆ, ಓಪನ್ ಯೂನಿವರ್ಸಿಟಿ
ಮೈಸೂರು, ಕರ್ನಾಟಕ, ಭಾರತ

**ಪ್ರೊ. ಮಹದೇವಿ**
ಪ್ರೊಫೆಸರ್ (ನಿ) ಮತ್ತು
ಐಸಿಎಸ್ಎಸ್ಆರ್ ಫೆಲೋ,
ಇತಿಹಾಸ ಅಧ್ಯಯನ ಮತ್ತು
ಸಂಶೋಧನಾ ವಿಭಾಗ,
ಮೈಸೂರು ಓಪನ್
ವಿಶ್ವವಿದ್ಯಾಲಯ, ಕರ್ನಾಟಕ,
ಭಾರತ

**Corresponding Author:**
**ಸಂತೋಷ ಶೆಟ್ಟಿ**
ಸಂಶೋಧಕ, ಇತಿಹಾಸ
ಅಧ್ಯಯನ ಮತ್ತು ಸಂಶೋಧನಾ
ಇಲಾಖೆ, ಓಪನ್ ಯೂನಿವರ್ಸಿಟಿ
ಮೈಸೂರು, ಕರ್ನಾಟಕ, ಭಾರತ

# ಮೈಸೂರು ಒಡೆಯರ ಕಾಲದಲ್ಲಿ ಪೊಲೀಸ್ ವ್ಯವಸ್ಥೆ – ಒಂದು ವಿಶ್ಲೇಷಣೆ

**ಸಂತೋಷ ಶೆಟ್ಟಿ ಮತ್ತು ಪ್ರೊ. ಮಹದೇವಿ**

ಕರ್ನಾಟಕವನ್ನು ಆಳಿದ ಪೂರ್ವರಾಜ ಮನೆತನಗಳಂತೆ ಮೈಸೂರು ಒಡೆಯರು, ತಮ್ಮ ರಾಜ್ಯದ ಪುರೋಭಿವೃದ್ಧಿಯಲ್ಲಿ ತಮ್ಮೊಡನೆ ಕೈಜೋಡಿಸುವ ಯಾವೊಬ್ಬರಲ್ಲೂ ಬೇಧವೆಣಿಸದೆ ಎಲ್ಲರ ಸಹಕಾರದೊಂದಿಗೆ ಕಾಲಕ್ಕನುಗುಣವಾಗಿ ಹೊಂದಿಕೊಂಡು ರಾಜ್ಯದ ಕಾನೂನು ಪರಿಪಾಲನೆ ಹಾಗೂ ಶಾಂತಿ–ಸುವ್ಯವಸ್ಥೆಗೆ ಪೂರಕವಾದ ವ್ಯವಸ್ಥೆಗಳನ್ನು ರೂಪಿಸಿಕೊಂಡು ಯಶಸ್ವಿಯಾಗಿ ರಾಜ್ಯಭಾರ ನಡೆಸಿರುವುದು ಸಮಕಾಲೀನ ಸಾಹಿತ್ಯ ಕೃತಿಗಳು ಮತ್ತು ಶಾಸನಗಳ ಅಧ್ಯಯನದಿಂದ ಕಂಡು ಬರುತ್ತದೆ. ಮೈಸೂರು ರಾಜ್ಯವು ಆಧುನಿಕ 'ಮಾದರಿ ರಾಜ್ಯ' ವೆಂದು ಕರೆಯಲ್ಪಡಲು ಇದ್ದ ಪ್ರಮುಖವಾದ ಕಾರಣಗಳಲ್ಲಿ ಆಗ ಅಸ್ತಿತ್ವದಲ್ಲಿದ್ದ 'ಪೊಲೀಸ್ ವ್ಯವಸ್ಥೆಯು' ಒಂದು. ಪ್ರಸ್ತುತ ಈ ಲೇಖನವು ಮೈಸೂರು ಒಡೆಯರ ಕಾಲದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಕುರಿತು ವಿವರಿಸುವ ಒಂದು ಕಿರು ಪರಿಚಯವಾಗಿರುತ್ತದೆ.

ಯಾವುದೇ ಒಂದು ರಾಜ್ಯ ತನ್ನ ಬೆಳವಣಿಗೆ ಮತ್ತು ಪ್ರಗತಿ ಸಾಧಿಸಬೇಕಾದರೆ ಅಲ್ಲಿನ ಆಂತರಿಕ ಭದ್ರತೆಯ ವ್ಯವಸ್ಥೆಯ ಮೇಲೆ ಅವಲಂಬಿತವಾಗಿರುತ್ತದೆ. ವಿಶೇಷವಾಗಿ ರಾಜ್ಯಗಳಲ್ಲಿ ಆಂತರಿಕ ಶಾಂತಿ–ಸುವ್ಯವಸ್ಥೆಗಳು ನೆಲೆಗೊಂಡಲ್ಲಿ ಆ ರಾಜ್ಯದಲ್ಲಿ ಪ್ರಗತಿ ಯಾವುದೇ ಅಡಚಣೆಯಿಲ್ಲದೆ ನಡೆಯುತ್ತದೆ. ಆಂತರಿಕ ಭದ್ರತೆಯಿಲ್ಲದಲ್ಲಿ ಅಂತಹ ರಾಜ್ಯದಲ್ಲಿ ಅಶಾಂತಿ ತಲೆದೋರಿ ಆಡಳಿತ ಸ್ವಾಭಾವಿಕವಾಗಿ ಕುಂಠಿತಗೊಳ್ಳುತ್ತದೆ. ಈ ಅಂಶವನ್ನು ಗಮನದಲ್ಲಿರಿಸಿಕೊಂಡು 'ಮಾದರಿರಾಜ್ಯ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ ಮೈಸೂರು ರಾಜ್ಯದಲ್ಲಿ ಒಡೆಯರ ಕಾಲದಲ್ಲಿದ್ದ ಪೊಲೀಸ್ ವ್ಯವಸ್ಥೆ ರಾಜ್ಯದ ಅಭಿವೃದ್ಧಿಗೆ ಎಷ್ಟರ ಮಟ್ಟಿಗೆ ಕಾರಣವಾಗಿದ್ದಿತು ಎಂಬುದನ್ನು ಪ್ರಸ್ತುತ ಈ ಲೇಖನದಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

'ಪೊಲೀಸ್' ಎಂಬ ಪದ ಗ್ರೀಕ್ ಪದದಿಂದ ಉದ್ಭವಿಸಿದೆ ಎಂದು ಆಧುನಿಕ ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಇದು ಸಮಾಜ ಮತ್ತು ಆಡಳಿತ ಅವಿಭಾಜ್ಯ ಅಂಗವಾಗಿದೆ. 'ಪೊಲೀಸ್ ಡಿಕ್ಷನರಿ ಡಾಟ್ ಕಾಮ್'ನಲ್ಲಿ ಸಮಾಜದಲ್ಲಿ ನಡೆಯುವ ಅಪರಾಧ ಕೃತ್ಯಗಳನ್ನು ಪತ್ತೆಹಚ್ಚಿ ಅದನ್ನು ತಡೆಯಲು ಕಾನೂನುಗಳನ್ನು ಜಾರಿಗೆ ತರುವ ಸಂಘಟಿತ 'ನಾಗರಿಕ ಪಡೆಗೆ' ಪೊಲೀಸ್ ಎಂದು ಕರೆಯಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯವು ಹೊರತಂದಿರುವ ಪರಿಷ್ಕೃತ 'ಇಂಗ್ಲೀಷ್–ಕನ್ನಡ ನಿಘಂಟು'ವಿನಲ್ಲಿ "ನಾಗರಿಕ ಆಡಳಿತ, ಪ್ರಜೆಗಳ ನೆಮ್ಮದಿ ರಕ್ಷಣೆ, ಸಾರ್ವಜನಿಕ ಶಾಂತಿಪಾಲನೆ ಕಾನೂನು ಕಟ್ಟಳೆಗಳನ್ನು ಜಾರಿಗೆ ತರುವ ಕರ್ತವ್ಯವುಳ್ಳ ದಳಕ್ಕೆ" ಪೊಲೀಸು ಎಂದು ಕರೆಯಲಾಗಿದೆ.

'ವಿಕಿಪಿಡಿ'ಯಾದಲ್ಲಿ "ಸಾರ್ವಜನಿಕ ಜೀವನದಲ್ಲಿ ಸುರಕ್ಷತೆ, ನೈತಿಕತೆ, ನೈರ್ಮಲ್ಯ ಮತ್ತು ಆರೋಗ್ಯದ ಬಗೆಗೆ ಜಾಗೃತಗೊಳಿಸುವುದು ಮತ್ತು ಅವುಗಳನ್ನು ನಿಯಂತ್ರಿಸುವ ಸಮುದಾಯಕ್ಕೆ" ಪೊಲೀಸ್ ಎಂದು ಕರೆಯಲಾಗಿದೆ. ನಿಯಂತ್ರಿಸುವುದು, ಮೇಲ್ವಿಚಾರಣೆ ನಡೆಸುವುದು ಹಾಗೂ ಬಂದೂಬಸ್ತು ಏರ್ಪಡಿಸುವುದು ಪೊಲೀಸರ ಕರ್ತವ್ಯವಾಗಿರುತ್ತದೆ.

ಪೊಲೀಸ್ ವ್ಯವಸ್ಥೆಯ ಉಗಮವನ್ನು ವಿಶ್ವದ ಮೊಟ್ಟಮೊದಲ ಕಾಲಘಟ್ಟದಲ್ಲಿಯೇ ಗುರುತಿಸಹುದು. ಬ್ಯಾಬಿಲೋನ್ ನಾಗರೀಕತೆಯ ಅರಸ ಹಮ್ಮುರಬಿಯು ಹೊರಡಿಸಿದ ಮೊದಲ ಶಾಸನದಲ್ಲಿ ಅಂದಿನ ಸಮಾಜದಲ್ಲಿದ್ದ ಅಪರಾಧ ಪ್ರವೃತ್ತಿಯನ್ನು ತಗ್ಗಿಸಲು ಮತ್ತು ಸಾಧ್ಯವಾದರೆ ಅದನ್ನು ಸಂಪೂರ್ಣ ನಿರ್ಮೂಲನೆ ಮಾಡಲು ಕೈಗೊಂಡ ಕ್ರಮಗಳನ್ನು ಕುರಿತು ವಿವರಿಸುತ್ತದೆ. ಆ ಕ್ರಮಗಳು ಅಥವಾ ಜಾರಿಗೆ

ತಂದ ಕಾನೂನುಗಳು ಅತ್ಯಂತ ಕ್ರೂರವೂ ಹಾಗೂ ಹಿಂಸಾದಾಯಕವೂ ಆಗಿ ಕಂಡು ಬಂದರೂ ಅವುಗಳು ಅಂದಿನ ವ್ಯವಸ್ಥೆಯಲ್ಲಿ ಆರೋಗ್ಯಕರವಾದ ಸಮಾಜವನ್ನು ನಿರ್ಮಾಣ ಮಾಡಲು ಮತ್ತು ಅದರ ಸ್ವಾಸ್ಥ್ಯವನ್ನು ಕಾಪಾಡಲು ಅತ್ಯಂತ ಅವಶ್ಯಕವಾಗಿದ್ದವು.

ಎ.ಡಿ. ಧರಣೇಶ ಅವರು "ಗ್ರೀಸ್, ರೋಂ ನಾಗರೀಕತೆಗಳ ಕಾಲದಿಂದಲೂ ಪೊಲೀಸ್ ವ್ಯವಸ್ಥೆ ಇರುವುದನ್ನು ಕಾಣಬಹುದು. ಯಾವ ಕಾಲದಲ್ಲೂ ಪೊಲೀಸ್ ವ್ಯವಸ್ಥೆ ಇಲ್ಲದಿರುವುದನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಹಾಗಾಗಿ ಮಾನವ ಸಮಾಜ ಸೃಷ್ಟಿಯಾದಾಗಿನಿಂದ ಪೊಲೀಸ್ ವ್ಯವಸ್ಥೆ ಕಾಲಕಾಲಕ್ಕೆ ಅಗತ್ಯವಾದದ್ದೇ ಆಗಿವೆ. ಒಂದು ರಾಜ್ಯದ ಬಾಹ್ಯಭದ್ರತೆಯನ್ನು ಸೈನಿಕರು ಕಾಪಾಡಿ ರಕ್ಷಿಸಿದರೆ, ಆಂತರಿಕ ಭದ್ರತೆಯನ್ನು ಪೊಲೀಸ್ ಇಲಾಖೆ ರಕ್ಷಿಸುತ್ತದೆ" ಎಂದು ತಮ್ಮ ಲೇಖನದಲ್ಲಿ ದಾಖಲಿಸಿದ್ದಾರೆ [1]. ಮುಂದುವರಿದು ಜನಸಾಮಾನ್ಯರ ಸಾರ್ವಜನಿಕರ ಆಸ್ತಿಪಾಸ್ತಿಗಳನ್ನು ರಕ್ಷಿಸುವುದು, ಅಪರಾಧಗಳನ್ನು ತಡೆಗಟ್ಟುವುದು, ಪತ್ತೆಹಚ್ಚುವುದು, ಸುಲಿಗೆಕೋರರು, ದರೋಡೆಕೋರರು ಹಾಗೂ ಕಳ್ಳಕಾಕರಿಂದ ರಕ್ಷಣೆ ನೀಡುವುದು, ಗುಪ್ತಮಾಹಿತಿ ಸಂಗ್ರಹಿಸುವುದು – ಇವೇ ಮೊದಲಾದ ಕರ್ತವ್ಯಗಳನ್ನು ಪೊಲೀಸರು ನಿರ್ವಹಿಸುವ ಮೂಲಕ ಸಮಾಜದಲ್ಲಿ ಶಾಂತಿ–ಸುವ್ಯವಸ್ಥೆಯನ್ನು ಕಾಪಾಡುತ್ತಾರೆಂದು ಹೇಳುತ್ತಾರೆ. ಆದರೆ ಅವರ ಕಾರ್ಯವೈಖರಿಗಳು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಹಂತ ಹಂತವಾಗಿ ಬದಲಾಗುತ್ತ ತಮ್ಮ ತಮ್ಮ ಸರಹದ್ದುಗಳಲ್ಲಿ ಕಾರ್ಯನಿರ್ವಹಿಸುತ್ತ ಬಂದಿವೆ. ಸಾಮಾನ್ಯವಾಗಿ ಹಿಂದಿನ ಕಾಲದಿಂದಲೂ ರಾಜಮಹಾರಾಜರುಗಳು ಈ ಕೆಲಸಗಳಿಗೆ ದಕ್ಷತೆ ಮತ್ತು ನಿಷ್ಠೆಪ್ರದರ್ಶಿಸುವ ದಷ್ಟಪುಷ್ಟ ವ್ಯಕ್ತಿಗಳನ್ನು ಮಾತ್ರ ನೇಮಕ ಮಾಡಿಕೊಳ್ಳುತ್ತಿದ್ದರು. ಅವರಿಗೆ ಕಾಲ ಕಾಲಕ್ಕೆ ಬಡ್ತಿಗಳನ್ನು ನೀಡುತ್ತ ಅವರ ಕೆಲಸದಲ್ಲಿ ಮತ್ತಷ್ಟು ನಿಷ್ಠೆ ತೋರಿಸಲು ಉತ್ತೇಜಿಸಿಕೊಂಡು ಬಂದಿರುವುದನ್ನು ಇತಿಹಾಸದ ಪುಟಗಳಲ್ಲಿ ನಾವು ಕಾಣಬಹುದು.

ಡಾ.ಡಿ.ವಿ.ಗುರುಪ್ರಸಾದ್ ಅವರು ರಚಿಸಿರುವ "ಕ್ರಿಮಿನಲ್ ಕಾನೂನುಗಳು ಹಾಗೂ ಪೊಲೀಸ್ ವ್ಯವಸ್ಥೆ" ಎಂಬ ಗ್ರಂಥದಲ್ಲಿ ಭಾರತದಲ್ಲಿ ಸಾಮ್ರಾಟ ಅಶೋಕನ ಕಾಲದಿಂದಲೂ ಪೊಲೀಸ್ ವ್ಯವಸ್ಥೆ ಜಾರಿಯಲ್ಲಿತ್ತು ಎನ್ನುತ್ತಾರೆ. ಇದರಿಂದ ಭಾರತದಲ್ಲಿ ಪೊಲೀಸ್ ವ್ಯವಸ್ಥೆ ಬಹಳ ಹಿಂದಿನಿಂದಲೂ ಗ್ರಾಮದ ಹಂತದಲ್ಲಿ ಅತ್ಯಂತ ಅಚ್ಚುಕಟ್ಟಾಗಿ ನಡೆದುಕೊಂಡು ಬರುತ್ತಿತ್ತು ಎಂಬುದು ವ್ಯಕ್ತವಾಗುವುದು. ಪ್ರಾಚೀನ ಕಾಲದಂತೆ ಮೈಸೂರು ರಾಜ್ಯದಲ್ಲೂ ಗ್ರಾಮದ ಮಟ್ಟದಲ್ಲಿ ಪಟೇಲ ಮತ್ತು ತಳವಾರರು ಪೊಲೀಸ್ ಆಡಳಿತ ಯಂತ್ರದ ಬೆನ್ನೆಲುಬಾಗಿದ್ದು ಪೊಲೀಸ್ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು ಎಂದು ದಾಖಲಿಸುತ್ತಾರ [2].

ಮೈಸೂರು ಸಂಸ್ಥಾನದಲ್ಲಿ ಪೊಲೀಸ್ ವ್ಯವಸ್ಥೆಯ ಪ್ರಾರಂಭವನ್ನು ಕ್ರಿ.ಶ.1834ರ ಜುಲೈನಲ್ಲಿ ಬ್ರಿಟೀಷ್ ಕಮಿಷನರ್ ಮಾರ್ಕ್ ಕಬ್ಬನನ ಆಡಳಿತಾವಧಿಯಲ್ಲಿ ಪ್ರಾರಂಭಿಸಲಾಯಿತೆಂದು, ಕೆ.ಎನ್.ವೆಂಕಟ ಸುಬ್ಬಶಾಸ್ತ್ರಿ ತಾವು ರಚಿಸಿರುವ 'ಅಡ್ಮಿನಿಸ್ಟ್ರೇಶನ್ ಆಫ್ ಮೈಸೂರ್ ಅಂಡರ್ ಸರ್ ಮಾರ್ಕ್ ಕಬ್ಬನ್' ಎಂಬ ಗ್ರಂಥದಲ್ಲಿ ಉಲ್ಲೇಖಿಸಿರುವರು [3]. ಮೈಸೂರು ಸಂಸ್ಥಾನದಲ್ಲಿ ಹುಕುಂನಾಮವನ್ನು ಹೊರಡಿಸುವುದಕ್ಕೆ ಪ್ರಮುಖ ಕಾರಣವನ್ನು ಈ ರೀತಿ ಗುರುತಿಸುತ್ತಾರೆ. ಕಂದಾಚಾರ್ ಪೊಲೀಸ್ ವ್ಯವಸ್ಥೆಯಲ್ಲಿರುವ ಸಿಪಾಯಿಗಳು ಮತ್ತು ಇತರ ಆಡಳಿತಗಾರರ ಕ್ಷೇತ್ರ, ವ್ಯಾಪ್ತಿ ಮತ್ತು ಇತಿಮಿತಿಗಳನ್ನು ಸರಿಯಾಗಿ ಗುರುತಿಸಿ ಅದರಂತೆ ಆ ವ್ಯಕ್ತಿಗಳಿಂದ ಅಥವಾ ಅಧಿಕಾರಿಗಳಿಂದ ಪೂರ್ವ ನಿಗದಿತವಾದಂತೆ ಅವರ ಕಾರ್ಯನಿರ್ವಹಣೆ ಇರದಿದ್ದರಿಂದ, ಕ್ರಿ.ಶ.1834ರಲ್ಲಿ ಹುಕುಂ ನಾಮವನ್ನು ಹೊರಡಿಸಿ ಆಧುನಿಕ ಪೊಲೀಸ್ ವ್ಯವಸ್ಥೆಗೆ ಮೈಸೂರಿನಲ್ಲಿ ಅಡಿಪಾಯವನ್ನು ಹಾಕಲಾಯಿತೆಂದು ಅವರು ವಿವರಿಸುತ್ತಾರೆ.

ಆದರೆ ಪೊಲೀಸ್ ಇಲಾಖೆಯಲ್ಲಿ ಐ.ಜಿ.ಪಿ.ಯಾಗಿ ಕಾರ್ಯನಿರ್ವಹಿಸಿದ ಬಿ.ಎನ್.ಗರುಡಾಚಾರ್ ರವರು ತಾವು ಸಂಕಲಿಸಿದ ಇಲಾಖೆಯ ಒಂದು ಶತಮಾನದ ಇತಿಹಾಸ ಮತ್ತು ಬೆಳವಣಿಗೆಯನ್ನು ಕುರಿತ ಗ್ರಂಥದಲ್ಲಿ ಕ್ರಿ.ಶ.1885, ನವೆಂಬರ್–01 ಆಧುನಿಕ ಪೊಲೀಸ್ ಕಾಯಿದೆ 1861ರ ಅನ್ವಯ ಕರ್ನಾಟಕದಲ್ಲಿ ಪೊಲೀಸ್ ಇಲಾಖೆಯನ್ನು ಸ್ವತಂತ್ರ ಇಲಾಖೆಯನ್ನಾಗಿ ಗುರುತಿಸಿದ್ದಲ್ಲದೆ ಈ ಇಲಾಖೆಯು ಸ್ವತಂತ್ರ್ಯವಾಗಿ ರಾಜ್ಯದಲ್ಲಿ ನಡೆಯುತ್ತಿದ್ದ ಅಪರಾಧಗಳನ್ನು ತಡೆಯುವ, ಪತ್ತೆಹಚ್ಚುವ ಘನ ಉದ್ದೇಶ ಉಳ್ಳದ್ದಾಗಿದ್ದಿತು. ಈ ಪೊಲೀಸ್ ವ್ಯವಸ್ಥೆಯನ್ನು ಮೊದಲು ಬೆಂಗಳೂರಿನಲ್ಲಿ ನಂತರ ಕಂಟೋನ್‌ಮೆಂಟ್ ಏರಿಯಾ ಮತ್ತು ಇತರ ಪ್ರದೇಶಗಳಲ್ಲಿ ಜಾರಿಗೆ ತರುವುದರ ಮೂಲಕ ನೂತನ ವ್ಯವಸ್ಥೆಗೆ ಅಡಿಪಾಯ ಹಾಕಲಾಯಿತೆಂದು ಅಭಿಪ್ರಾಯಿಸುತ್ತಾರೆ [4].

ಈ ಎರಡು ವಿದ್ಯಾಮಾನಗಳನ್ನು ಗಮನಿಸಿದರೆ ಇದು ಯೂರೋಪಿಯನ್ ಪೊಲೀಸ್ ವ್ಯವಸ್ಥೆಯ ಮೊದಲ ಹೆಜ್ಜೆಯ ಕುರುಹುಗಳೆಂದು ಭಾವಿಸಬೇಕಾಗುತ್ತದೆ. ಆದರೆ ಇದಕ್ಕೆ ಪೂರ್ವದಲ್ಲಿ ಮೈಸೂರು ರಾಜ್ಯವು ಪೊಲೀಸ್ ವ್ಯವಸ್ಥೆಯನ್ನು ಹೊಂದಿದ್ದರೆ ಅಥವಾ ಇಲ್ಲವೆ ಎಂಬ ಪ್ರಶ್ನೆ ಎದುರಾಗುತ್ತದೆ.

ಡಾ॥ ಪಿ.ಜಗದೀಶನ್‌ರವರು ತಮ್ಮ ಗ್ರಂಥ "ಲಾ ಅಂಡ್ ಇನ್ ಆರ್ಡರ್ ಇನ್ ಮಾಡ್ರನ್ ಪ್ರೆಸಿಡೆನ್ಸಿ"ಯಲ್ಲಿ ಬ್ರಿಟೀಷ್ ಆಗಮನಕ್ಕೆ ಪೂರ್ವದಲ್ಲಿ ಭಾರತದಲ್ಲಿ ಚಾಲ್ತಿಯಲ್ಲಿದ್ದ ಅದರಲ್ಲೂ ವಿಶೇಷವಾಗಿ ಮೈಸೂರು ಪ್ರಾಂತ್ಯವನ್ನೊಳಗೊಂಡಂತೆ ದಕ್ಷಿಣ ಭಾರತದಲ್ಲಿ ಪ್ರಚಲಿತದಲ್ಲಿದ್ದ ಪೊಲೀಸ್ ವ್ಯವಸ್ಥೆಯನ್ನು ಕುರಿತು ಹೀಗೆ ಅಭಿಪ್ರಾಯ ಪಡುತ್ತಾರೆ. "ದಕ್ಷಿಣ ಭಾರತದಲ್ಲಿ ಬ್ರಿಟೀಷ್ ಆಗಮನಕ್ಕೆ ಪೂರ್ವದಲ್ಲಿದ್ದ ಪೊಲೀಸ್ ವ್ಯವಸ್ಥೇ ಅಂದರೆ 18ನೇ ಶತಮಾನದಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ಚಲಾವಣೆಯಲ್ಲಿದ್ದ ಪೊಲೀಸ್ ವ್ಯವಸ್ಥೆಗಿಂತ ಕೆಳಮಟ್ಟದ್ದಾಗಿರದೆ ಬಹುತೇಕ ಸಂದರ್ಭಗಳಲ್ಲಿ ಇವು ಹೆಚ್ಚು ವಿಚಕ್ಷಣೆಯಿಂದ ಕೂಡಿದ ಜನಪರ ವ್ಯವಸ್ಥೆಯಾಗಿದ್ದು ಗ್ರಾಮಮಟ್ಟದಲ್ಲಿ ಸ್ವಾಯತ್ತತೆ ಹೊಂದಿದ್ದ ಪರಂಪರಾನುಗತ ಹೊಂದಿದ್ದ ವ್ಯವಸ್ಥೆಯಾಗಿದ್ದಿತು. ಈ ವ್ಯವಸ್ಥೆಯನ್ನು ಬ್ರಿಟೀಷರು ತಮ್ಮದಾಗಿಸಿಕೊಂಡು ಕೆಲವೊಂದು ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಇದನ್ನು ಬಹಳಷ್ಟು ದಿನಗಳವರೆಗೆ ಮುಂದುವರಿಸಿಕೊಂಡು ಹೋದರು. ಈ ಪದ್ಧತಿ 19ನೇ ಶತಮಾನದ ಮಧ್ಯಭಾಗದವರೆಗೆ ಯಾವುದೇ ಬದಲಾವಣೆಗಳಿಲ್ಲದೆ ಮುಂದುವರಿಯಿತೆಂದು ದಾಖಲಿಸುತ್ತಾರೆ [5].

ದೇಶಿಯ ಪೊಲೀಸ್ ವ್ಯವಸ್ಥೆಯ ಬಗ್ಗೆ ಬ್ರಿಟೀಷ್ ಅಧಿಕಾರಿ ಸರ್ ಥಾಮಸ್ ಮನ್ರೋ ಹೀಗೆ ಅಭಿಪ್ರಾಯ ಪಡುತ್ತಾರೆ; "ಭಾರತದಲ್ಲಿ ಈಗಾಗಲೇ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿರುವ ಪೊಲೀಸ್ ವ್ಯವಸ್ಥೆ ಬಹಳ ಉಪಯುಕ್ತವಾಗಿ ಕೆಲಸ ನಿರ್ವಹಿಸುತ್ತಿದೆ. ಪ್ರತಿಯೊಂದು ಗ್ರಾಮದಲ್ಲೂ ವಂಶಪಾರಂಪರ್ಯವಾಗಿ ನೇಮಕಗೊಂಡಿದ್ದ ತೋಟಿ ತಳವಾರರು ಗ್ರಾಮಸ್ಥರ ಆಸ್ತಿ–ಪಾಸ್ತಿಗಳನ್ನು ರಕ್ಷಿಸುವುದು, ಕಳೆದುಹೋದ ಮಾಲುಗಳನ್ನು ಹುಡುಕಿಕೊಡುವುದು, ಕಳ್ಳರನ್ನು ಪತ್ತೆಹಚ್ಚುವುದು, ಪ್ರಾಮಾಣಿಕರನ್ನು ಕಾಪಾಡುವುದು ಇತ್ಯಾದಿಗಳು ತೋಟಿ–ತಳವಾರರ ಆದ್ಯ ಕರ್ತವ್ಯಗಳಾಗಿದ್ದವು" [6] ಎನ್ನುತ್ತಾರೆ.

'ಪೊಲೀಸ್ ' ಎಂದರೆ ಪ್ರಜೆಗಳ ನೆಮ್ಮದಿಯ ಸಂರಕ್ಷಣೆ ಮಾಡುವವನು, ಸಾರ್ವಜನಿಕ ಶಾಂತಿಪರಿಪಾಲಕ, ಕಾನೂನು ವ್ಯವಸ್ಥೆ ಕಾಪಾಡುವವನು, ಆರಕ್ಷಕ, ತೋಟಿ ತಳವಾರಿಕೆ ನಡೆಸುವವನು ಹೀಗೆ ಬೇರೆ ಬೇರೆ ಪ್ರದೇಶಗಳಲ್ಲಿ ಹಾಗೂ ಕಾಲಘಟ್ಟಗಳಲ್ಲಿ ಪೊಲೀಸನ ಬಗೆಗೆ ವ್ಯಾಖ್ಯಾನಗಳನ್ನು

ಮಂಡಿಸಲಾಗಿದೆ. ಪೊಲೀಸನು ಒಂದು ರಾಷ್ಟ್ರದ, ರಾಜ್ಯದ ಅಥವಾ ಪ್ರದೇಶದಲ್ಲಿ ಸಂಘಟಿತಗೊಂಡಿರುವ ಸಮಾಜ ಮತ್ತು ರಾಜ್ಯದ ಆಡಳಿತದ ಅವಿಭಾಜ್ಯ ಅಂಗವಾಗಿರುತ್ತಾನೆ. ಆಡಳಿತ ನಡೆಸುವವರ ಮತ್ತು ಪ್ರಜೆಗಳ ನಡುವಿನ ಕೊಂಡಿಯಾಗಿ ಕೆಲಸ ಮಾಡುತ್ತ, ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವುದು ಪೊಲೀಸನ ಕರ್ತವ್ಯವಾಗಿರುತ್ತದೆ.

ಒಟ್ಟಿನಲ್ಲಿ 'ಪೊಲೀಸ್' ಎಂಬುದು ಒಂದು 'ದಳ' ಅಥವಾ 'ಸಂಸ್ಥೆ'ಯಾಗಿದ್ದು, ಜನರಿಗೆ ಉತ್ತರದಾಯಿಯಾಗಿದೆ. ಸಾಮಾಜಿಕ ಸೇವೆಗಳು ಹಾಗೂ ತುರ್ತುಸೇವೆಗಳು ಒಳಗೊಂಡಂತೆ ರಾಜ್ಯ ಮತ್ತು ಸಮಾಜದಲ್ಲಿ ಶಾಂತಿ–ಸುವ್ಯವಸ್ಥೆಯನ್ನು ಕಾಪಾಡುವ ಒಬ್ಬ ಹೊಣೆಗಾರಿಕೆ, ಕರ್ತವ್ಯನಿರತ ಸಾರ್ವಜನಿಕ 'ನೌಕರ' ಎಂದು ಕರೆಯಬಹುದು. ಈ ಹಿನ್ನೆಲೆಯಲ್ಲಿ ಮೈಸೂರು ಒಡೆಯರ ಕಾಲದಲ್ಲಿದ್ದ ಪೊಲೀಸ್ ವ್ಯವಸ್ಥೆಯನ್ನು ಮತ್ತು 'ಪೊಲೀಸ್' ವ್ಯವಸ್ಥೆಯ ರೀತಿನೀತಿಗಳನ್ನು ಸಂಕ್ಷಿಪ್ತವಾಗಿ ಈ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ.

ಶ್ರೀ ಹೆಚ್.ಎಂ.ವೀರಭದ್ರಯ್ಯ, ವಕೀಲರು "ಕರ್ನಾಟಕ ಪೊಲೀಸ್ ಮ್ಯಾನ್ಯುಯಲ್" ಎಂಬ ಹೆಸರಿನಲ್ಲಿ ಮೂರು ಸಂಪುಟಗಳನ್ನು ಹೊರತಂದಿದ್ದು, ಅದರ ಮುನ್ನುಡಿಯಲ್ಲಿ ಅಂದಿನ ಕರ್ನಾಟಕ ಸರ್ಕಾರದ ಗೃಹಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಈ ರೀತಿ ಹೇಳುತ್ತಾರೆ. "ಬಾದಾಮಿಯ ಚಾಲುಕ್ಯರಿಂದ ಮೊದಲುಗೊಂಡು (ಕ್ರಿ.ಶ.ಆರನೆಯ ಶತಮಾನ) ಕಲ್ಯಾಣದ ಚಾಲುಕ್ಯರ ಆಳ್ವಿಕೆಯ ಅಂತ್ಯದವರೆಗೆ (ಕ್ರಿ.ಶ.ಹನ್ನೆರಡನೆಯ ಶತಮಾನ) ನಮ್ಮ ರಾಜ್ಯ (ಕನ್ನಡನಾಡು) ಅಖಂಡವಾಗಿತ್ತು. ಹಾಗೂ ಒಂದೇ ಆಡಳಿತಕ್ಕೆ ಒಳಪಟ್ಟಿತ್ತು. ತದನಂತರ, ಅದು ಹಲವಾರು ರಾಜಕೀಯ ಕಾರಣಗಳಿಂದಾಗಿ, ಶತಶತಮಾನಗಳುದ್ದಕ್ಕೂ ಮೈಸೂರು ಒಡೆಯರೂ ಸೇರಿದಂತೆ, ಬೇರೆ ಬೇರೆ ಅರಸು ಮನೆತನಗಳ ಮತ್ತು ವಿದೇಶಿಯರ ಆಳ್ವಿಕೆಗೆ ಒಳಪಡುತ್ತ ಹೋಯಿತು. ಭಾರತದ ಯಾವುದೇ ಭಾಷೆಯನ್ನಾಡುವ ಜನ, ಹೀಗೆ ಹಲವಾರು ಆಡಳಿತಗಳಿಗೆ ಶತಮಾನಗಳುದ್ದಕ್ಕೂ ಒಳಪಟ್ಟ ಉದಾಹರಣೆಗಳಿಲ್ಲ. ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಮೈಸೂರು ರಾಜ್ಯ (ಕನ್ನಡ ನಾಡು) ಬೇರೆ ಬೇರೆ ಆಡಳಿತ ವಿಭಾಗಗಳಲ್ಲಿ ಹರಿದು ಹಂಚಿಹೋಗಿದ್ದಿತು. ಈ ರೀತಿ ವಿಭಿನ್ನ ಆಡಳಿತಗಳಿಗೆ ಒಳಪಟ್ಟ ಕನ್ನಡದ ಆಯಾ ಪ್ರದೇಶಗಳಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಕಾನೂನುಗಳು ಬೇರೆ ಬೇರೆಯಾಗಿಯೇ ಇದ್ದವು. ಪೊಲೀಸ್ ಇಲಾಖೆ ಇದಕ್ಕೆ ಹೊರತಲ್ಲ" [7] ಎಂದಿದ್ದಾರೆ.

ಆಧುನಿಕ ಪೊಲೀಸ್ ವ್ಯವಸ್ಥೆಯ ವಿಕಾಸಗಳನ್ನು ಸಾಮಾನ್ಯವಾಗಿ ಆಧುನಿಕ ಇತಿಹಾಸಕಾರರು ಕ್ರಿ.ಶ.1861ರ 'ಭಾರತೀಯ ಪೊಲೀಸ್ ಕಾಯ್ದೆ'ಯ ಜಾರಿಯಿಂದ ಪ್ರಾರಂಭಿಸುತ್ತಾರೆ.

ಎಂ.ವಿ.ಶ್ರೀನಿವಾಸ, ಇತಿಹಾಸ ನಿವೃತ್ತ ಪ್ರಾಧ್ಯಾಪಕರು ಇವರು ಮೈಸೂರು ಒಡೆಯರ ಕಾಲದಲ್ಲಿ 'ಪೊಲೀಸ್ ನಡೆದು ಬಂದ ದಾರಿ' ಎಂಬ ತಮ್ಮ ಲೇಖನದಲ್ಲಿ ಮೈಸೂರು ಒಡೆಯರ ಕಾಲದಲ್ಲಿ ಪೊಲೀಸ್ ಇಲಾಖೆಯ ಆರಂಭ ಮತ್ತು ಬೆಳವಣಿಗೆಯ ಕೆಲವು ಮಜಲುಗಳನ್ನು ಗುರುತ್ತಿಸುತ್ತ "ಮೈಸೂರು ಸಂಸ್ಥಾನದಲ್ಲಿ ಆಳುತ್ತಿದ್ದ ಒಡೆಯರು ಒಂದು ಸುವ್ಯವಸ್ಥಿತವಾದ ಆಡಳಿತ ಕ್ರಮಗಳನ್ನು ಹೊಂದಿದ್ದರು. ಪ್ರಾರಂಭದ ಒಡೆಯರ ಆಳ್ವಿಕೆಯಲ್ಲಿ ಮೈಸೂರು ರಾಜ್ಯದ ಮುಖ್ಯ ಕೇಂದ್ರಗಳಲ್ಲಿ ಹಾಗೂ ಗಡಿಗಳಲ್ಲಿ ಪೊಲೀಸ್ ಪಡೆಗಳಿದ್ದು ಅವು ಬೆಳಿಗ್ಗೆ ಮತ್ತು ರಾತ್ರಿ ರಾಜ್ಯದ ರಕ್ಷಣೆಯನ್ನು ನೋಡಿಕೊಳ್ಳುತ್ತಿದ್ದವು" [8] ಎಂದು ಹೇಳುತ್ತಾರೆ.

ವೇಣುಗೋಪಾಲರಾವ್‌ರವರ "ಕಿಂಟುಭಿಜ ಣಟಿಜಜಡಿ ಇಭಣ ಖಟಿಜುಚ ಅಂಟಂರಿಚಿಟಿಥಿ" ಎಂಬ ಗ್ರಂಥದಲ್ಲೂ ಕೂಡ ಪೊಲೀಸ್ ವ್ಯವಸ್ಥೆ ಬ್ರಿಟೀಷರ ಕಾಲದಲ್ಲಿ ಉದ್ಭವವಾಯಿತೆಂದು ಹೇಳುತ್ತಾರೆ. ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಕಾಲದಲ್ಲಿ ಪೊಲೀಸರ ಕರ್ತವ್ಯವನ್ನು ಉಲ್ಲೇಖಿಸುತ್ತಾ 'ಈ ಕಾಲದಲ್ಲಿದ್ದ ಪೊಲೀಸ್ ವ್ಯವಸ್ಥೆಯು ಹಣಕಾಸಿನ ರವಾನೆಯ ರಕ್ಷಣೆ, ಗಂಧದ ಮರಗಳ ರಕ್ಷಣೆ ಮತ್ತು ಸಂರಕ್ಷಣೆ ಹಾಗೂ ಅವುಗಳ ಸಾಗಣೆ, ಬ್ರಿಟೀಷ್ ನಾಗರೀಕರ ಮತ್ತು ಕಂಪನಿಯ ಆದಾಯದ ಮೂಲಗಳನ್ನು ಸಂರಕ್ಷಿಸುವ ಹಾಗೂ ಕಾಪಾಡುವುದನ್ನೇ ಮುಖ್ಯ ಉದ್ದೇಶಗಳನ್ನಾಗಿ ಹೊಂದಿದ್ದಿತು. ಆಡಳಿತವೆಂಬ ಕೀಲಿಯು ದೇಶೀಯ ಆಡಳಿತಗಾರರಿಂದ ಈಸ್ಟ್ ಇಂಡಿಯಾ ಕಂಪನಿಗೆ ಹಸ್ತಾಂತರವಾದದ್ದೂ ಸಹ ಪೊಲೀಸ್ ವ್ಯವಸ್ಥೆಯ ಉಗಮದ ಕಾರಣಗಳಲ್ಲಿ ಒಂದಾಗಿದೆ' ಎಂಬುದು ಇವರ ಅಭಿಪ್ರಾಯವಾಗಿದೆ [9].

ಭಾರತದಲ್ಲಿ ಮಧ್ಯಯುಗೀನ ಸಂಧ್ಯ ಕಾಲವು ಸಮೀಪಿಸುತ್ತಿದ್ದಂತೆ, ಮೊಗಲ್ ಸಾಮ್ರಾಜ್ಯದ ಅಧಿಕಾರ ಶಿಥಿಲಗೊಂಡು ಬ್ರಿಟೀಷರು ಭಾರತದಲ್ಲಿ ಭದ್ರವಾಗಿ ನೆಲೆಯೂರಲು ಕಾರಣವಾಯಿತು. ಬ್ರಿಟೀಷರು ಭಾರತಕ್ಕೆ ಆಗಮಿಸಿದ ನಂತರದ ಕಾಲದಲ್ಲಿ ಆಧುನಿಕ ಪರಿವರ್ತನೆಯ ಚಿಂತನೆಗಳು ಮೊಳಕೆಯೊಡೆಯಲಾರಂಭಿಸಿದವು. ಬ್ರಿಟೀಷರ ದಾಸ್ಯದ ಸಂಕೋಲೆಗಳು ಭಾರತೀಯತೆಯನ್ನು ಕಟ್ಟಿಹಾಕಲು ಪ್ರಯತ್ನಿಸಿದಾಗ ದೇಶದ ಮೂಲೆ ಮೂಲೆಗಳಲ್ಲಿ ಸ್ವಾತಂತ್ರ್ಯ ಹೋರಾಟದ ಜ್ವಾಲೆ ಪ್ರಜ್ವಲಿಸಲಾರಂಭಿಸಿತು. ಅದು ಮೈಸೂರು ಸಂಸ್ಥಾನವನ್ನು ಹೊರತಾಗಿಸಿರಲಿಲ್ಲ. ಈ ಹೋರಾಟದ ಜ್ವಾಲೆಯನ್ನು ಹತ್ತಿಕ್ಕಲು ಭಾರತದಲ್ಲಿ ಪೊಲೀಸ್ ವ್ಯವಸ್ಥೆಯ ಅನಿವಾರ್ಯತೆ ಉಂಟಾಯಿತು. ಅದು ಮೈಸೂರು ಸಂಸ್ಥಾನದಲ್ಲೂ ವಿಸ್ತರಿತಗೊಂಡಿತು.

ಬ್ರಿಟೀಷ್ ಆಕ್ರಮಿತ ಭಾರತೀಯ ರಾಜ್ಯಗಳಲ್ಲಿ ಭೂತೆರಿಗೆ ಮತ್ತು ಇತರ ತೆರಿಗೆಗಳನ್ನು ಸಂಗ್ರಹಿಸಲು, ಕಾಪಾಡಲು ಮತ್ತು ಸಂಗ್ರಹಿಸಿದ್ದನ್ನು ರವಾನಿಸಲು ಹಾಗೂ ಆಡಳಿತವನ್ನು ಅಭಿವೃದ್ಧಿಪಡಿಸಲು ಅವರಿಗೆ ಒಂದು ಸುವ್ಯವಸ್ಥಿತವಾದ ರಕ್ಷಣಾಪಡೆ ಅವಶ್ಯಕವಿದ್ದಿತು. ಇದು ಸೈನಿಕ ಪಡೆಗೆ ಹೊರತಾಗಿ ಕಾರ್ಯನಿರ್ವಹಿಸಬೇಕಾಗಿದ್ದಿತು. ಈ ಕಾರ್ಯವನ್ನು ಚಾಲ್ತಿಗೆ ತರಲು ಕ್ರಿ.ಶ.1861ರಲ್ಲಿ ಭಾರತೀಯ ಪೊಲೀಸ್ ಕಾಯ್ದೆಯ ಮೂಲಕ ಭಾರತೀಯ ರಾಜ್ಯಗಳಲ್ಲಿ ಪೊಲೀಸ್ ವ್ಯವಸ್ಥೆಯನ್ನು ಅಂಕುರಾರ್ಪಣ ಮಾಡಲಾಯಿತೆಂದು ವೇಣುಗೋಪಾಲ್‌ರಾವ್‌ರವರ ಅಭಿಪ್ರಾಯವಾಗಿದೆ.

ಮೇಲೆ ಹೇಳಿದ ಕಾರಣಗಳಿಗಾಗಿ ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಈ ಕಾರ್ಯಗಳಿಗೆ ತನ್ನದೇ ಪೊಲೀಸ್ ವ್ಯವಸ್ಥೆಯನ್ನು ಸೀಮಿತ ಪರಿಮಿತಿಯಲ್ಲಿ ಕ್ರಿ.ಶ.1861ರ ಭಾರತೀಯ ಪೊಲೀಸ್ ಕಾಯ್ದೆಗೆ ಪೂರ್ವದಲ್ಲಿಯೇ ಪ್ರಾರಂಭಿಸಿದ್ದಿತು ಎಂದು ವ್ಯಕ್ತವಾಗುತ್ತದೆ. ಇದನ್ನು ಮೈಸೂರು ರಾಜ್ಯವು ಟಿಪ್ಪುವಿನ ಮರಣದ ತರುವಾಯ, ಬ್ರಿಟೀಷರ ಸಹಾಯಕ ಸೈನ್ಯ ಪದ್ಧತಿಯ ಕರಾರಿಗೆ ಸಹಿ ಹಾಕಿದ ನಂತರದ ಕಾಲದಲ್ಲಿ ಕಾಣುತ್ತೇವೆ.

ಈ ರೀತಿಯಲ್ಲಿ ಕಾನೂನು ಪರಿಪಾಲನೆ ಮತ್ತು ಸಾರ್ವಜನಿಕ ಶಾಂತಿ ಕಾಪಾಡಿ ಆಸ್ತಿಪಾಸ್ತಿಗಳನ್ನು ಕಾಪಾಡಲು ಪೊಲೀಸ್ ವ್ಯವಸ್ಥೆ ಹಿಂದಿನಿಂದಲೂ ಅಸ್ತಿತ್ವಕ್ಕೆ ಬಂದಿದ್ದರೂ, ಅದರ ತೀವ್ರತರವಾದ ಅವಶ್ಯಕತೆ ಉಂಟಾದುದು ಆಧುನಿಕ ಕಾಲದಲ್ಲಿ. ಮೈಸೂರು ರಾಜ್ಯ ಇದಕ್ಕೆ ಹೊರತಾಗಿರಲಿಲ್ಲ. ಕ್ರಿ.ಶ.ಹದಿನೆಂಟನೆ ಶತಮಾನದಿಂದೀಚೆಗೆ 'ಕಂದಾಚಾರ್' ಎಂಬ ಪೊಲೀಸ್ ವ್ಯವಸ್ಥೆ ಮೈಸೂರು ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಈ ವ್ಯವಸ್ಥೆ ಕೆಲವು ಬದಲಾವಣೆಗಳೊಂದಿಗೆ ಹೈದರಾಲಿ, ಟಿಪ್ಪುಸುಲ್ತಾನ್ ಮತ್ತು ಪೂರ್ಣಯ್ಯನವರ ಕಾಲದಲ್ಲೂ ಮುಂದುವರಿಯಿತು. ಅಷ್ಟೇ ಅಲ್ಲ ರಾಜ್ಯದಲ್ಲಿದ್ದ ಪೊಲೀಸ್ ವ್ಯವಸ್ಥೆ

ಬ್ರಿಟೀಷ್ ಪೂರ್ವ ಕಾಲದಲ್ಲೇ ರೂಪಗೊಂಡಿತ್ತು. ಆದರೆ ಅದು ನಾವು ಇಂದು ಕಾಣುವ ರೀತಿಯ ಪೊಲೀಸ್ ವ್ಯವಸ್ಥೆಯಾಗಿರಲಿಲ್ಲ. ಗ್ರಾಮದ ಮಟ್ಟದಲ್ಲಿ ತೋಟಿ, ತಳವಾರ ಹಾಗೂ ಪಟೇಲರ ಅಧೀನದಲ್ಲಿ ಪೊಲೀಸ್ ವ್ಯವಸ್ಥೆ ಅಚ್ಚುಕಟ್ಟಾಗಿ ನಡೆದುಕೊಂಡು ಬರುತ್ತಿತ್ತು. ಕ್ರಿ.ಶ.1834ರಲ್ಲಿ ಜಾರಿಗೆ ಬಂದ ಹುಕುಂನಾಮ ಮತ್ತು ಪೂರ್ಣಯ್ಯನವರ ಕಂದಾಚಾರ ವ್ಯವಸ್ಥೆಯಲ್ಲಿ ಆಧುನಿಕ ಪೊಲೀಸ್ ವ್ಯವಸ್ಥೆಯ ಪ್ರಾರಂಭಿಕ ಹಂತಗಳನ್ನು ಕಾಣಬಹುದು [10].

ಯಾವುದೇ ಒಂದು ರಾಜ್ಯ ತನ್ನ ಮೇರು ಯಶಸ್ಸನ್ನು ಕಾಣಬೇಕಾದರೆ, ಆ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಗಳು ಸಮರ್ಪಕವಾಗಿ ಅನುಷ್ಠಾನಗೊಂಡಾಗ ಮಾತ್ರ ಅದು ಸಾಧ್ಯವಾಗುತ್ತದೆ. ಮೈಸೂರು ಒಡೆಯರು ಭಾರತದಲ್ಲಿನ ಎಲ್ಲಾ ರಾಜಮನೆತನಗಳಿಗಿಂತ ಸುಧೀರ್ಘಕಾಲ ಆಡಳಿತ ನಡೆಸಿದರೆಂದರೆ, ಅವರು ತಮ್ಮ ವಿಚಕ್ಷಣತೆಯಿಂದ ಪುಟ್ಟ ಪಾಳಯಪಟ್ಟಗಿದ್ದ ಮೈಸೂರನ್ನು ಮೂಲ ನೆಲೆಯನ್ನಾಗಿ ಮಾಡಿಕೊಂಡು, ಘಟ್ಟಿಭದ್ರವಾಗಿ ಕಟ್ಟಿ, ವಿಸ್ತರಿಸಿ, ಆಂತರಿಕ ಭದ್ರತೆ ನೆಲೆಗೊಳ್ಳುವಂತೆ ಮಾಡುವುದರಲ್ಲಿ ಅವರು ನಿರ್ವಹಿಸಿದ ಪಾತ್ರದಿಂದಲೇ ಅದು ಸಾಧ್ಯವಾಗಿರುತ್ತದೆ.

ಮೈಸೂರು ಒಡೆಯರು ಕೈಗೊಂಡ ಶಾಂತಿ-ಸುವ್ಯವಸ್ಥೆಯ ಕ್ರಮಗಳು ರಾಜ್ಯವು ಕಲೆ ಮತ್ತು ಸಾಂಸ್ಕೃತಿಕ ಕಾರ್ಯಚಟುವಟಿಕೆಗಳ ನೆಲೆಬೀಡಾಗುವಂತೆ ಮಾಡಿದವು. ವಿವಿಧ ಮತ, ಧರ್ಮ, ಭಾಷೆಗಳನ್ನಾಡುವ ಜನರು ಸಾಮರಸ್ಯದಿಂದ ಬದುಕಲು ಅವಕಾಶ ಕಲ್ಪಿಸಿತು. ರಾಜ್ಯದ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಸರ್ವಜನರೂ ಶಾಂತಿನೆಮ್ಮದಿಗಳಿಂದ ಬದುಕಲು ಒಡೆಯರೊಂದಿಗೆ ಅಂದಿನ ಪೊಲೀಸ್ ಅಧಿಕಾರಿಗಳೂ ಅವಿರತವಾಗಿ ಶ್ರಮಿಸಿರುವುದು ಕಂಡು ಬರುತ್ತದೆ. ದೊರೆ ಧರ್ಮಪ್ರಭುವಾಗಿದ್ದು; ಪ್ರಜೆಗಳೂ ನೀತಿವಂತರಾಗಿದ್ದರೆ, ಆ ರಾಜ್ಯಕ್ಕೆ ಎಂದೂ ಕುಂದುಬಾರದು. ಈ ರೀತಿಯಲ್ಲಿ ನಾಡು-ನುಡಿಯ ರಕ್ಷಣೆಯಲ್ಲಿ ಒಡೆಯರು ಮತ್ತು ಪೊಲೀಸರು ವಹಿಸಿದ ಮಹೋನ್ನತ ಪಾತ್ರಕ್ಕೆ ಇತಿಹಾಸ ಲೇಖಕರು ಸಾಕಷ್ಟು ಮಹತ್ವ ನೀಡಿಲ್ಲ. ಹಾಗಾಗಿ ಮೈಸೂರು ಒಡೆಯರ ಕಾಲಕ್ಕೆ ಸಂಬಂಧಿಸಿದ ಪೊಲೀಸ್ ವ್ಯವಸ್ಥೆಯನ್ನು ಕುರಿತು ಸಮಗ್ರವಾಗಿ ಅಧ್ಯಯನ ಮಾಡವ ವ್ಯವಸ್ಥೆ ಆಗಬೇಕಿದೆ.

ಒಡೆಯರ ಆಳ್ವಿಕೆಯ ಪ್ರಾರಂಭಿಕ ಹಂತದಿಂದ ವಸಾಹತುಶಾಹಿಗಳ ಆಗಮನದವರೆಗೆ; ತದನಂತರ ಭಾರತ ಸ್ವಾತಂತ್ರ್ಯಗಳಿಸುವವರೆಗಿನ ಮೈಸೂರು ರಾಜ್ಯದ ಪೊಲೀಸ್ ವ್ಯವಸ್ಥೆಗೆ ಸಂಬಂಧಿಸಿದ ಮತ್ತು ಅದರ ರೂಪುರೇಷಗಳ ಅಧ್ಯಯನವು ಅತ್ಯಂತ ಪ್ರಾಮುಖ್ಯವಾಗಿರುತ್ತದೆ. ವಸಾಹತುಶಾಹಿಗಳ ರೀತಿ ನೀತಿಗಳ ಹಿನ್ನೆಲೆಯಲ್ಲಿ ಪೊಲೀಸ್ ವ್ಯವಸ್ಥೆಯ ಅವಶ್ಯಕತೆ ಮತ್ತು ಅದರ ಗುಣಾವಗುಣಗಳನ್ನು ವಿವೇಚಿಸುವ ಹಾಗೂ ಮೈಸೂರು ಸಂಸ್ಥಾನದಲ್ಲಿ ಹಂತ ಹಂತವಾಗಿ ಜಾರಿಗೊಂಡ ವ್ಯವಸ್ಥೆಯ ಒಟ್ಟಾರೆ ಬೆಳವಣಿಗೆಯನ್ನು ರಾಜ್ಯದ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಅವುಗಳ ಪ್ರಭಾವ ಇತ್ಯಾದಿಗಳನ್ನು ಗುರುತಿಸುವ ಮಹತ್ತರ ಕಾರ್ಯ ಆಗಬೇಕಿದೆ.

ಮೈಸೂರು ಒಡೆಯರ ರಾಜಕೀಯ ಇತಿಹಾಸವು ಪರಂಪರಾನುಗತ ದಾಖಲೆಗಳ ಪ್ರಕಾರ ಕ್ರಿ.ಶ.1399 ರಲ್ಲಿ ಪ್ರಾರಂಭವಾಯಿತ್ತೆಂದು ಶ್ರೀಮನ್ಮಹಾರಾಜರವರ ವಂಶಾವಳಿಯಲ್ಲಿ ದಾಖಲಾಗಿರುತ್ತದೆ. 3ನೇ ಬೆಟ್ಟದ ಚಾಮರಾಜ ಒಡೆಯರು ಕ್ರಿ.ಶ 1513ರಲ್ಲಿ ಮೈಸೂರು ಸಂಸ್ಥಾನದ ಅಥವಾ ಅಂದಿನ ಮೈಸೂರು ಪಾಳೇಪಟ್ಟಿನ ಆಡಳಿದ ಚುಕ್ಕಾಣಿಯನ್ನು ಹಿಡಿಯುವವರೆಗೆ ಅದು ಗಮನಾರ್ಹವಾದ ರಾಜಕೀಯ ಶಕ್ತಿಯಾಗಿ ಬೆಳೆದಿರಲಿಲ್ಲ ಎಂದು ಮೈಸೂರು ಇತಿಹಾಸಕಾರ ಸಿ.ಹಯವದನರಾವ್‌ರವರು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಆದರೆ ಕ್ರಿ.ಶ.1399 ರಿಂದ 1513ರ ವರೆಗಿನ ಇತಿಹಾಸವನ್ನು ದಾಖಲಿಸಲು ಸಾಕಷ್ಟು ಆಕರಗಳು ಲಭ್ಯವಿಲ್ಲದಿರುವುದನ್ನು ಇತ್ತೀಚಿನ ಪ್ರಕಟಣೆಗಳು ವ್ಯಕ್ತಪಡಿಸುತ್ತವೆ. ಅಂದಿನಿಂದ ಕ್ರಿ.ಶ.1610ರವರೆಗೆ ಮೈಸೂರು ಒಡೆಯರು ವಿಜಯನಗರ ಸಾಮ್ರಾಜ್ಯದ ಸಾಮಂತ ಅರಸರಾಗಿದ್ದರಷ್ಟೆ. ವಿಜಯನಗರ ಸಾಮ್ರಾಜ್ಯದ ಆಡಳಿತದ ನೆರಳಿನಲ್ಲಿ ಅವರು ತಮ್ಮ ಆಡಳಿತವನ್ನು ನಡೆಸುತ್ತಿದ್ದರು. ಕ್ರಿ.ಶ.1578ರಲ್ಲಿ ರಾಜಒಡೆಯರು ಅಧಿಕಾರ ಸ್ವೀಕರಿಸುವಾಗ ಈ ಮೈಸೂರು ರಾಜ್ಯವು 33 ಹಳ್ಳಿಗಳನ್ನೊಳಗೊಂಡ ಒಂದು ಸಣ್ಣ ಪಾಳೇಪಟ್ಟಾಗಿದ್ದಿತು. ರಾಜಒಡೆಯರು ಕೆಸರೆ ಯುದ್ಧದ ತರುವಾಯ ಹಂತ ಹಂತವಾಗಿ ಮುಂದುವರಿದು ಶಕ್ತಿಶಾಲಿಗಳಾಗಿ, ಶ್ರೀರಂಗಪಟ್ಟಣದ ರಾಜ್ಯಪಾಲ ತಿರುಮಲನ ಅಧ್ಯಕ್ಷತೆಯನ್ನು ಬಳಸಿಕೊಂಡು ಒಡೆಯರ ಮನೆತನದ ಪ್ರಭುತ್ವವನ್ನು ಬೆಳೆಸಲು ಕಾರಣರಾದರು. ಮೈಸೂರು ಒಡೆಯರ ರಾಜಕೀಯ ಬೆಳವಣಿಗೆ ಇಲ್ಲಿಂದ ಪ್ರತಿ ಹಂತದಲ್ಲಿಯು ರೋಚಕವಾಗುತ್ತ ಮುಂದುವರಿಯುತ್ತದೆ.

ಹೀಗೆ ಕ್ರಿ.ಶ.1513 ರಿಂದ 1947ರ ವರೆಗೆ ಸುಮಾರು ಐದು ಶತಮಾನಗಳಿಗೂ ಅಧಿಕ ಕಾಲ, ಸುಮಾರು 25 ಜನ ಅರಸರು ಮೈಸೂರು ಸಂಸ್ಥಾನವನ್ನು ಆಳುವ ಮೂಲಕ ಅವಿಚ್ಛಿನ್ನ ಪರಂಪರೆಯನ್ನು ಮುಂದುವರಿಸಿಕೊಂಡು ಬಂದರು. ಹೀಗಾಗಿ ಮೈಸೂರು ಒಡೆಯರ ಇತಿಹಾಸ, ಆಡಳಿತ ಮತ್ತು ಕೊಡುಗೆಗಳ ಬಗೆಗೆ ಹಲವು ಆಯಾಮಗಳಲ್ಲಿ ಈವರೆಗೆ ಸಂಶೋಧನೆ ನಡೆದಿದೆಯಾದರೂ ಕೇವಲ ಆಂತರಿಕ ಶಿಸ್ತು ಮತ್ತು 'ರಕ್ಷಣೆಯ ವ್ಯವಸ್ಥೆಗೆ' ಮೀಸಲಾದ ಈ ಪೊಲೀಸ್ ವ್ಯವಸ್ಥೆಯ ಅಧ್ಯಯನಕ್ಕೆ ಸಂಬಂಧಿಸಿದಂತೆ ನಡೆದಿಲ್ಲವೆಂದು ಖಚಿತವಾಗಿ ಹೇಳಬಹುದು. ಮೈಸೂರು ಒಡೆಯರ ಬಗೆಗೆ ನಡೆದಿರುವ ಸಂಶೋಧನೆಗಳ ಮೂಲ ಆಕರಗಳು ಹಾಗೂ ಇನ್ನಿತರ ಮಹತ್ವದ ಕೃತಿಗಳನ್ನು ಗಮನಿಸಿದಾಗ ಪ್ರಕಟಿತ ಗ್ರಂಥಗಳಲ್ಲಿ ಮೈಸೂರು ಪೊಲೀಸ್ ವ್ಯವಸ್ಥೆಯ ಬಗೆಗೆ ಅಧ್ಯಯನ ನಡೆದಿರುವುದು ಅತ್ಯಲ್ಪವೆಂದು ಕಂಡುಬರುತ್ತದೆ. ಮೈಸೂರು ಅರಸರು ಪ್ರಾರಂಭದ ದಿನಗಳಿಂದಲೂ ಕೇವಲ ರಾಜಕೀಯ ಉದ್ದೇಶದಿಂದ ಮಾತ್ರವಲ್ಲದೆ, ಸಾಂಸ್ಕೃತಿಕ ಉದ್ದೇಶದಿಂದಲೂ ತಮ್ಮ ಪ್ರಭುತ್ವನ್ನು ಮತ್ತು ಅಧಿಕಾರವನ್ನು ಬೆಳೆಸಿದ್ದುದು ಆ ಕಾಲ ಘಟ್ಟದಲ್ಲಿ ನಡೆದು ಬಂದ ಸತ್ಸಂಪ್ರದಾಯಗಳು ಹಾಗೂ ಪರಂಪರೆಗಳು ಪ್ರತಿ ಬಿಂಬಿಸುತ್ತವೆ.

ಮೈಸೂರು ಸಂಸ್ಥಾನವನ್ನು ಬ್ರಿಟೀಷ್ ಭಾರತದ ಇತಿಹಾಸದಲ್ಲಿ 'ಮಾದರಿ ರಾಜ್ಯ'ವೆಂದು ಪರಿಗಣಿಸಿದುದು; ಆ ಕಾಲಘಟ್ಟದ ಒಡೆಯರುಗಳು ಪ್ರಜೆಗಳ ಯೋಗ ಕ್ಷೇಮಗಳನ್ನು ಆಡಳಿತದ ಮೂಲ ಉದ್ದೇಶವಾಗಿ ಹೊಂದಿದ್ದುದರಿಂದಲೇ ಎಂಬುದು ದಾಖಲೆಗಳ ಅಧ್ಯಯನದಿಂದ ವ್ಯಕ್ತಪಡುತ್ತದೆ. ಇಡೀ ಭರತಖಂಡ ವಸಾಹತುಶಾಹಿ ನೀತಿಯಡಿ ರಾಜಪ್ರಭುತ್ವದ ನಿರಂಕುಶಾಧಿಕಾರಕ್ಕೆ ಒತ್ತುಕೊಟ್ಟ ಕಾಲಘಟ್ಟದಲ್ಲಿ, ಮೈಸೂರು ಸಂಸ್ಥಾನ ತನ್ನ ಆಡಳಿತವನ್ನು ಪ್ರಜೆಗಳ ಮಟ್ಟಕ್ಕೆ ಕೊಂಡ್ಯೊಯ್ದಿತು. ಅಂದರೆ ಮೈಸೂರು ಸಂಸ್ಥಾನ ಮೊಟ್ಟಮೊದಲ ಬಾರಿಗೆ ಆಳಿಸಿಕೊಳ್ಳುವವರ ಸಲಹೆ ಸೂಚನೆಗಳನ್ನು ಪಡೆದು ಅದರಂತೆ ಸಂಸ್ಥಾನದ ಆಡಳಿತ ರೂಪುರೇಖೆಗಳನ್ನು ನಿರ್ದೇಶಿಸಲಾರಂಭಿಸಿತು. ಇದು ನಂತರದ ಕಾಲಘಟ್ಟದಲ್ಲಿ ಕಂಡು ಬಂದ ಆಡಳಿತದ ಎಲ್ಲ ಉತ್ತಮ ಅಂಶಗಳನ್ನು ಮೈಗೂಡಿಸಿಕೊಂಡು ಮುಂದುವರಿಯಿತು. ಇದೊಂದು ಮಹತ್ವದ ಸಾಧನೆಯಾಗಿದೆ. ಹೀಗೆ ಅತಿ ಸಾಮಾನ್ಯವಾದ ಪೊಲೀಸ್ ವ್ಯವಸ್ಥೆಯನ್ನು ಹೊಂದಿದ್ದ ಮೈಸೂರು ರಾಜ್ಯ, ಹಂತ ಹಂತವಾಗಿ ಆಧುನೀಕರಣ ಪ್ರಕ್ರಿಯೆಗೆ ಒಳಗಾಗಿ ದೇಶದಲ್ಲಿಯೇ ಉತ್ತಮವೆನಿಸಿಕೊಂಡ ಪೊಲೀಸ್ ವ್ಯವಸ್ಥೆಯನ್ನು ತನ್ನದಾಗಿಸಿಕೊಂಡಿತು. ಮೈಸೂರು ಒಡೆಯರ ಕಾಲದಲ್ಲಿ ಬೆಳವಣಿಗೆ

ಸಾಧಿಸಿದ ಪೊಲೀಸ್ ವ್ಯವಸ್ಥೆಯನ್ನು 3 ಹಂತಗಳಲ್ಲಿ ಗುರುತಿಸಬಹುದಾಗಿದೆ [11].

ಮೈಸೂರು ರಾಜ್ಯವು ಮೊದಲಿಗೆ ಸ್ಥಾನಿಕ ಪರಂಪರೆಗೆ ಅನುಗುಣವಾಗಿ ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ ಪರಂಪರಾನುಗತವಾಗಿ ಬಂದ ಕಾವಲು ವ್ಯವಸ್ಥೆಯನ್ನು ಹೊಂದ್ದಿತು. ಗ್ರಾಮಗಳಲ್ಲಿ ಗಾವುಂಡರು ಅಥವಾ ಗೌಡರು ಈ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು ಕೋಟೆಗಳನ್ನು ಹೊಂದಿದ್ದ ನಗರಗಳಲ್ಲಿ ಕೋಟೆಯ ರಕ್ಷಣಾಧಿಕಾರಿಯೇ ಪೋಲೀಸ್ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದನು. ಈ ಎಲ್ಲಾ ವ್ಯವಸ್ಥೆಗಳು ವಸಹತುಶಾಹಿಗಳ ಪ್ರಭಾವಕ್ಕೆ ಒಳಗಾದ ನಂತರ ಯುರೋಪಿಯನ್ ಮಾದರಿಯಲ್ಲಿ ಆಧುನೀಕರಣಗೊಳ್ಳುವ ಅನಿವಾರ್ಯತೆಯನ್ನು ಕಂಡುಕೊಂಡಿತ್ತು. ಪರಂಪರೆಯನ್ನು ಕಳೆದುಕೊಂಡು ಆಧುನಿಕತೆಯ ಕವಚತೊಟ್ಟ ಈ ಸಂದರ್ಭದಲ್ಲಿ ಪೊಲೀಸ್ ವ್ಯವಸ್ಥೆಯಲ್ಲಿ ಕರ್ತವ್ಯ ಮತ್ತು ಜವಾಬ್ದಾರಿಗಳು ಅಧಿಕವಾದರೂ; ಅಧಿಕಾರಿಗಳು ಮತ್ತು ವ್ಯವಸ್ಥೆ ಸಾಮಾಜಿಕ ಹೊಣೆಗಾರಿಕೆಯನ್ನೂ, ಉತ್ತರದಾಯಿತ್ವವನ್ನೂ ಕಳೆದುಕೊಳ್ಳಲಾರಂಭಿಸಿದುದನ್ನು ಈ ಹಂತದಲ್ಲಿ ಗಮನಿಸಬಹುದಾಗಿದೆ.

ಪ್ರಾಚೀನ ಪರಂಪರೆಯಲ್ಲಿ ಗ್ರಾಮಾಧಿಕಾರಿಗಳು ತಮ್ಮ ಪ್ರದೇಶದಲ್ಲಿ ನಡೆದ ಕಳ್ಳತನ ದರೋಡೆ ಮುಂತಾದವುಗಳನ್ನು ಪತ್ತೆ ಹಚ್ಚುವಲ್ಲಿ ವಿಫಲವಾದ ಸಂದರ್ಭಗಳಲ್ಲಿ ಸಾರ್ವಜನಿಕ ಸಂಪತ್ತಿಗೆ ತುಂಬಿಕೊಡಬೇಕಾಗಿದ್ದಿತು. ಆದರೆ ಆಧುನಿಕ ಪೊಲೀಸ್ ವ್ಯವಸ್ಥೆಯಲ್ಲಿ ಆದ ನಷ್ಟವನ್ನು ಗ್ರಾಮಾಡಳಿತದ ಅಧಿಕಾರಿಗಳು ಅಥವಾ ಪೋಲೀಸ್ ವ್ಯವಸ್ಥೆಯಲ್ಲಿ ತುಂಬಿಕೊಡುವ ಕಟ್ಟುಪಾಡು ಕಂಡು ಬರುವುದಿಲ್ಲ. ಇವೆಲ್ಲವು ಒಂದರ್ಥದಲ್ಲಿ ಆ ಕಾಲದ ಪೋಲೀಸ್ ವ್ಯವಸ್ಥೆಯು ಬೇರೆ ರೀತಿಯಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ಸೂಚಿಸುತ್ತದೆ. ಹಾಗಿದ್ದರೂ ಈ ವ್ಯವಸ್ಥೆಯಲ್ಲಿ ಹಲವಾರು ಬಗೆಯ ಉತ್ತಾಮಾಂಶಗಳಿರುವುದನ್ನು ಗುರುತಿಸಬಹುದು. ಸಮಾಜದಲ್ಲಿ 'ಬದಲಾವಣೆ' ನಿರಂತರವು ಮತ್ತು 'ಸರ್ವಕಾಲಿನವು' ಆದ್ದರಿಂದ ಹೊಸ ವ್ಯವಸ್ಥೆಗೆ ಒಗ್ಗಿಕೊಳ್ಳಬೇಕಾದದ್ದು ಹಾಗೂ ಹೊಸ ವ್ಯವಸ್ಥೆಯನ್ನು ಒಪ್ಪಿಕೊಳ್ಳುವುದು ಅಭಿವೃದ್ಧಿಯ ದೃಷ್ಟಿಯಿಂದ ಅನಿವಾರ್ಯವಾಗಿರುತ್ತದೆ. ಇದೆಲ್ಲವನ್ನು ರೂಢಿಸಿಕೊಂಡು ಹಂತ ಹಂತವಾಗಿ ಮುಂದುವರಿದುದೇ ಮೈಸೂರು ಸಂಸ್ಥಾನದ ಪೊಲೀಸ್ ವ್ಯವಸ್ಥೆಯ ಮಹತ್ವದ ಸಾಧನೆ ಎನ್ನಬಹುದು. ಪ್ರಾರಂಭದ ದಿನಗಳಲ್ಲಿ ಕೇವಲ ಆಳರಸನ ಅಂಕೆಗೆ ಒಳಪಟ್ಟಿದ್ದ ಪೊಲೀಸ್ ವ್ಯವಸ್ಥೆ ಕಾಲಕಳೆದಂತೆ ಸಾರ್ವಜನಿಕರ ರಕ್ಷಣೆಯನ್ನು ಹಾಗೂ ನಾಡಿನಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಮಹತ್ವದ ಉದ್ದೇಶಗಳನ್ನಿರಿಸಿಕೊಂಡು ಮುಂದುವರಿಯಿತು.

ಸ್ವಾತಂತ್ರ ಆಂದೋಲನ ಸಂದರ್ಭದಲ್ಲಿ, ಭಾರತದ ಎಲ್ಲಾ ಪ್ರಾಂತ್ಯಗಳಲ್ಲೂ ಬ್ರಿಟೀಷ್ ಆಡಳಿತದ ವಿರುದ್ಧ ಪ್ರತಿಭಟನೆಯನ್ನು ನಡೆಸುತ್ತಿದ್ದ ಸಂದರ್ಭದಲ್ಲಿ, ಮೈಸೂರು ಸಂಸ್ಥಾನದಲ್ಲೂ ಜನರು ಬ್ರಿಟೀಷ್ ಆಡಳಿತದ ವಿರುದ್ಧವಾಗಿ ಕಾರ್ಯ ನಿರ್ವಹಿಸಿದರು. ಇಂತಹ ಸಂದರ್ಭಗಳಲ್ಲೂ ಭಾರತದಾದ್ಯಂತ ಇತರ ಪ್ರಾಂತೀಯ ಪೊಲೀಸರು ಬ್ರಿಟೀಷ್ ಅಧಿಕಾರಿಗಳ ಆದೇಶಗಳನ್ನು ಪಾಲಿಸುವುದರೊಂದಿಗೆ ಜನವಿರೋಧಿಗಳಾಗಿ ನಡೆದುಕೊಂಡಿರುವುದನ್ನು ಚರಿತ್ರೆಯ ಪುಟಗಳಲ್ಲಿ ಕಾಣಬಹುದು. ಮೈಸೂರು ಸಂಸ್ಥಾನದ ಪೊಲೀಸರೂ ಕೂಡ ಅದೇ ಮಾರ್ಗವನ್ನು ಅನುಸರಿಸಿದರೂ ಕೆಲವು ಸಂದರ್ಭಗಳಲ್ಲಿ ಅವರು ಸಂಯಮದಿಂದ ಕಾರ್ಯನಿರ್ವಹಿಸುವ ಮೂಲಕ ಸಂಸ್ಥಾನದ ಪ್ರಜೆಗಳ ಹೋರಾಟಕ್ಕೆ ಬೆಂಬಲಿಸಿರುವುದನ್ನು ಇತಿಹಾಸದ ದಾಖಲೆಗಳಲ್ಲಿ ಕಾಣಬಹುದಾಗಿದೆ. ಹೀಗಾಗಿ ಮೈಸೂರು ಸಂಸ್ಥಾನದ ಪೊಲೀಸ್ ವ್ಯವಸ್ಥೆಯ ಇತಿಹಾಸವನ್ನು ಕುರಿತು ಹಲವು ದೃಷ್ಟಿಗಳಿಂದ ಮತ್ತು ಹಲವಾರು ಬೆಳವಣಿಗೆಗಳ ಹಿನ್ನಲೆಯಲ್ಲಿ ಸಂಶೋಧನಾತ್ಮಕ ಅಧ್ಯಯನ ಮಾಡುವುದು ಮಹತ್ವಪೂರ್ಣವಾಗಿ ಕಂಡು ಬರುತ್ತದೆ.

ಕ್ರಿ.ಶ.1799ರಲ್ಲಿ ಟಿಪ್ಪುವಿನ ಮರಣದ ತರುವಾಯ ಮೈಸೂರು ರಾಜ್ಯವನ್ನು ಮೂರು ಭಾಗ ಮಾಡಿ ಒಂದು ಭಾಗವನ್ನು ಒಡೆಯರ ಮನೆತನದ ಮುಮ್ಮಡಿ ಕೃಷ್ಣರಾಜ ಒಡೆಯರವರಿಗೆ ಪ್ರಧಾನ ಮಾಡುವುದರ ಮೂಲಕ, ಮೈಸೂರು ಒಡೆಯರ ಪರಂಪರೆ ಮತ್ತೆ ಅಧಿಕಾರದ ಮುಂಚೂಣಿಗೆ ಬಂದಿತು. ಪುನಃ ಕ್ರಿ.ಶ.1831ರಲ್ಲಿ ಅರಾಜಕತ್ವದ ನೆಪವೊಡ್ಡಿ ಬ್ರಿಟೀಷರು ಮೈಸೂರು ಸಂಸ್ಥಾನದ ಆಡಳಿತವನ್ನು ಕಿತ್ತುಕೊಂಡರಾದರು, ಮಹಾರಾಣಿ ಲಕ್ಷ್ಮಮ್ಮಣ್ಣಿಯವರ ಸುಧೀರ್ಘ ಪ್ರಯತ್ನದ ತರುವಾಯ ಮತ್ತೆ ಮೈಸೂರು ಸಂಸ್ಥಾನ ಒಡೆಯರ ಪರಂಪರೆಯ ಆಡಳಿತಕ್ಕೆ ಕ್ರಿ.ಶ.1881ರಲ್ಲಿ ವರ್ಗಾವಣೆಯಾಯಿತು. ಅಲ್ಲಿಂದ ಭಾರತ ಸ್ವಾತಂತ್ರವಾಗುವವರೆಗೆ ಮೈಸೂರು ಸಂಸ್ಥಾನವು ಒಡೆಯರ ಪರಂಪರೆಯ ಆಡಳಿತದಲ್ಲಿಯೇ ಮುಂದುವರಿಯಿತು.

ಈ ನಡುವೆ, ಕ್ರಿ.ಶ.1831–1881ರ ಕಾಲಘಟ್ಟಗಳಲ್ಲಿ ಸ್ಥಾನಿಕ ಪೊಲೀಸ್ ವ್ಯವಸ್ಥೆ ಹಲವು ಹಂತಗಳಲ್ಲಿ ಮಾರ್ಪಾಡಾಗುತ್ತಾ ಮುಂದುವರಿಯಿತು [12]. ಅದರಲ್ಲೂ ಮುಖ್ಯವಾಗಿ ಬ್ರಿಟೀಷ್ ಕಮೀಷನರ್ಸ್‌ಗಳಾದ ಮಾರ್ಕ್‌ಕಬ್ಬನ್ ಮತ್ತು ಎಲ್.ಬಿ.ಬೌರಿಂಗರ ಆಳ್ವಿಕೆಯಲ್ಲಿ ಮಹತ್ವಪೂರ್ಣವಾದ ಪೊಲೀಸ್ ಸುಧಾರಣೆಗಳು ನಡೆದವು. ಇಲ್ಲಿಂದಲೇ ನಿಜವಾದ ಪೊಲೀಸ್ ವ್ಯವಸ್ಥೆ ಮೈಸೂರು ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರುವುದನ್ನು ಕಾಣಬಹುದಾಗಿದೆ. ಒಂದು ವ್ಯವಸ್ಥಿತವಾದ ಬಿಗಿಯಾದ ಆಡಳಿತ ತರುವಲ್ಲಿ ಪೊಲೀಸ್ ವ್ಯವಸ್ಥೆಯ ಪಾತ್ರ ಎಂತಹದೆಂಬುದನ್ನು ಬ್ರಿಟೀಷ್ ಕಮೀಷನರುಗಳ ಮೈಸೂರು ಪ್ರಾಂತ್ಯದ ಆಡಳಿತ ಕಾಲದಲ್ಲಿ ನಾವು ಮನಗಾಣುತ್ತೇವೆ. ಕ್ರಿ.ಶ.1861ರಲ್ಲಿ ಜಾರಿಗೆ ತಂದ 1861ರ ಪೊಲೀಸ್ ಕಾಯ್ದೆಯನ್ವಯ ಮೈಸೂರು ಸಂಸ್ಥಾನದ ಪೊಲೀಸ್ ವ್ಯವಸ್ಥೆಯನ್ನು ಉನ್ನತೀಕರಿಸುವ ಪ್ರಕ್ರಿಯೆ ಪ್ರಾರಂಭವಾಯಿತು. ಇದಾದ ನಂತರ ಹಂತ ಹಂತವಾಗಿ ಮೈಸೂರು ಪೊಲೀಸ್ ವ್ಯವಸ್ಥೆ, ಭಾರತೀಯ ಪೊಲೀಸ್ ವ್ಯವಸ್ಥೆಯನ್ನು ಅನುಕರಿಸಲಾರಂಭಿಸಿತು.

ಕ್ರಿ.ಶ.1881ರ ನಂತರ ಮೈಸೂರು ಸಂಸ್ಥಾನವನ್ನಾಳಿದ ಪ್ರಗತಿಪರ ಒಡೆಯರುಗಳು ಎನಿಸಿದ ಹತ್ತನೇ ಚಾಮರಾಜೇಂದ್ರ ಒಡೆಯರ್ (ಕ್ರಿ.ಶ.1881–1894) ನಾಲ್ವಡಿ ಕೃಷ್ಣರಾಜ ಒಡೆಯರ್ (ಕ್ರಿ.ಶ.1902–1940) ಹಾಗೂ ಜಯಚಾಮರಾಜ ಒಡೆಯರವರು (ಕ್ರಿ.ಶ.1940–1947) ಸಮಾಜದಲ್ಲಿ ಬೇರೂರಿದ್ದ ಹಲವಾರು ಅನಿಷ್ಟ ಪದ್ಧತಿಗಳಾದ ಬಾಲ್ಯವಿವಾಹ ನಿರ್ಬಂಧ ಶಾಸನ, ವಿಧವಾ ಪುನರ್ ವಿವಾಹ ಶಾಸನ, ದೇವದಾಸಿ ಪದ್ಧತಿಯ ನಷೇದ, ಸ್ತ್ರೀಯರಿಗೆ ಸಮಾನ ಹಕ್ಕು, ಅಸ್ಪೃಶ್ಯತ ನಿವಾರಣೆ, ಅಪ್ರಾಪ್ತರ ಧೂಮಪಾನ ನಿರ್ಬಂಧ ಕಾಯ್ದೆ ಮುಂತಾದ ಸಾಮಾಜಿಕ ಉನ್ನತೀಕರಣದ ಹಲವಾರು ಬಗೆಯ ಕಾನೂನುಗಳು ಈ ಅವಧಿಯಲ್ಲಿ ಜಾರಿಗೆ ಬಂದವು. ಅವುಗಳೆಲ್ಲದರ ಹಿನ್ನಲೆಯಲ್ಲಿ ಪೊಲೀಸರ ಕರ್ತವ್ಯಗಳು ಮತ್ತು ಜವಾಬ್ದಾರಿಗಳು ಅಧಿಕವಾದವು. ಮೈಸೂರು ಸಂಸ್ಥಾನದ ಆಡಳಿತದಲ್ಲಿ ಅದರಲ್ಲೂ ಆಧುನಿಕ ಮೈಸೂರಿನ ನಿರ್ಮಾತೃವಾದ ನಾಲ್ವಡಿ ಕೃಷ್ಣರಾಜ ಒಡೆಯರು ಸುಮಾರು 40 ವರ್ಷಗಳ ತಮ್ಮ ಸುದೀರ್ಘ ಆಡಳಿತದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಬೆಳೆಸಿರುವುದು ಗಮನಾರ್ಹವಾಗಿ ಕಂಡುಬರುತ್ತದೆ ಎಂಬುದನ್ನು ಲೇಖನದಲ್ಲಿ ತಿಳಿಸಲಾಗಿದೆ.

## ಉಲ್ಲೇಖಗಳು

1. ಧರಣೇಶ್, ಎ.ಡಿ. ಪೊಲೀಸ್ ಠಾಣೆಗಳು, ಕೇಂದ್ರ ಕಾರಾಗೃಹ.

ಮೈಸೂರು ದರ್ಶನ, ಪ್ರಸಾರಂಗ, ಕರಾಮುವಿ, ಮೈಸೂರು, 2011, ಪು–690–708.

2. ಗುರುಪ್ರಸಾದ್, ಡಿ.ವಿ. ಎ.ಪಿ.ಎಸ್.: ಕ್ರಿಮಿನಲ್ ಕಾನೂನುಗಳು ಹಾಗೂ ಪೊಲೀಸ್ ವ್ಯವಸ್ಥೆ. ತಾಶಿ ಇಂಡಿಯಾ, ಬೆಂಗಳೂರು, 2006, ಪು–1–4.
3. Sastri K.N. Venkatasubba. Administration of Mysore under Sir Mark Cubbon (1834-1861). London, 1931, P-32-47.
4. Garudachar, B.N. Policing in Karnataka Growth in a Century. Police Printing Press, Bangalore, 1985, P-1.
5. Jagadheesan, P. Law and in Order in Modern Presidency 1850-1880. B.R. Publishing Corporation, Delhi, 1987, P-7-8.
6. Rao Hayavadana. Mysore Administrative Report, 1866-1947. Mysore Gazetteer, IV, 1930.
7. ವೀರಭದ್ರಯ್ಯ, ಹೆಚ್.ಎಂ. ಕರ್ನಾಟಕ ಪೊಲೀಸ್ ಮ್ಯಾನ್ಯುಯಲ್. ಲಾಯರ್ಸ್ ಲಾ ಬುಕ್, ಬೆಂಗಳೂರು, 2002, ಪುಟ, ಮುನ್ನಡಿ, ಪು–ಗಿ – ಗಿ೫.
8. ಶ್ರೀನಿವಾಸ್, ಎಂ.ವಿ. ಪೊಲೀಸ್ ನಡೆದು ಬಂದ ದಾರಿ. ಮೈಸೂರು ದರ್ಶನ, ಸಂಪುಟ–1, ಪ್ರಸಾರಂಗ, ಕರಾಮುವಿ, ಮೈಸೂರು, 2011, ಪು–676–685.
9. Venugopal. Police under East India Company. P-10-25.
10. Op.cit, Sastri K.N. Venkatasubba- P-35-50.
11. Ibid, P-55 Police Chiefs of Karnataka State, 1885-1985. Police Printing Press, Bengaluru, 1985.
12. Ibid-P.57